ಚಿಕ್ಕನಾಯಕನಹಳ್ಳಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ ವಿಜ್ಞಾನದ ವಿಭಾಗ

356 - ಶ್ರೀ ಎನ್. ಬಸವಯ್ಯ (ಚಿಕ್ಕನಾಯಕನಹಳ್ಳಿ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1995-97ನೇ ಸಾಲಿಗೆ ಚಿಕ್ಕನಾಯಕನಹಳ್ಳಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ ವಿಜ್ಞಾನ ವಿಭಾಗವನ್ನು ತೆರೆಯುವ ಬಗ್ಗೆ ಸರ್ಕಾರದವರು ಪರಿಶೀಲಿಸುವರೆ?*

ಶ್ರೀ ಡಿ. ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು) :

ಅ) ಹೌದು.

ವೈದ್ಯಕೀಯ ಮಹಾವಿದ್ಯಾಲಯದಿಂದ ಪದವಿ ಪಡೆದ ಅಭ್ಯರ್ಥಿಗಳ ಕುರಿತು

358 - ಶ್ರೀ ಬಿ.ಬಿ. ಚಿಮ್ಮನಕಟ್ಟಿ (ಬಾದಾಮಿ) : ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದ ಮತ್ತು ಹೊರ ರಾಜ್ಯದ ಕಳೆದ 5 ವರ್ಷಗಳಿಂದ ರಾಜ್ಯದ ಪ್ರತಿಯೊಂದು ವೈದ್ಯಕೀಯ ಮಹಾವಿದ್ಯಾಲಯದಿಂದ ಪದವಿಯನ್ನು ಪಡೆದು ವೈದ್ಯಕೀಯ ವೃತ್ತಿಯನ್ನು ನಡೆಸಲು ಅರ್ಹತೆ ಪಡೆದಿರುವ ಅಭ್ಯರ್ಥಿಗಳ ಸಂಖ್ಯೆ ಎಷ್ಟು?*

ಆ) *ಸರ್ಕಾರಿ ಮತ್ತು ಖಾಸಗೀ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಸರ್ಕಾರಿ ಹಂಚಿಕೆಯ ಸ್ಥಾನಗಳಲ್ಲಿ ಓದುತ್ತಿರುವ ಓರ್ವ ವಿದ್ಯಾರ್ಥಿಗೆ ಸರ್ಕಾರ ಎಷ್ಟು ಒಟ್ಟಾರೆ ಖರ್ಚು ಮಾಡಬೇಕಾಗಿದೆ.*

ಇ) *ಸರ್ಕಾರಿ ಹಾಗೂ ಖಾಸಗಿ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಸರ್ಕಾರದ ಸ್ಥಾನ ಹಂಚಿಕೆಯಲ್ಲಿ ಪದವಿ ಪಡೆಯುವ ವೈದ್ಯರೆಲ್ಲರೂ ಕಡ್ಡಾಯವಾಗಿ ಗ್ರಾಮೀಣ ಸೇವೆಯನ್ನು ಮಾಡಬೇಕೆಂಬ ಷರತ್ತು ಸರ್ಕಾರ ವಿಧಿಸುವುದು ಯೋಗ್ಯವಲ್ಲವೇ? ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು?*

ಶ್ರೀ ಎ.ಬಿ. ಪಾಟೀಲ್ (ವೈದ್ಯಕೀಯ ಶಿಕ್ಷಣ ಸಚಿವರು) :

ಅ) ಪ್ರತ್ಯೇಕ ಪಟ್ಟಿ ಲಗತ್ತಿಸಿದೆ.

ಆ) ಪ್ರೊಫೆಸರ್ ರುದ್ರಯ್ಯ ಸಮಿತಿಯು 1993ರಲ್ಲಿ ನೀಡಿರುವ ವರದಿಯ ಪ್ರಕಾರ ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ಓದುತ್ತಿರುವ ಓರ್ವ ವಿದ್ಯಾರ್ಥಿಗೆ ವಾರ್ಷಿಕ ಸರಾಸರಿ 43000-00 ರೂಪಾಯಿಯಂತೆ 1,93,500ರೂಪಾಯಿ ಹಾಗೂ ಹೌಸಮನ್‌ಶಿಪ್, ಅವಧಿಯಲ್ಲಿ ನೀಡುವ ಸ್ಟೈಫಂಡ್ 1800ರೂಪಾಯಿ 12 ತಿಂಗಳು 21,600 ರೂಪಾಯಿಗಳನ್ನು ನೀಡಲಾಗುತ್ತಿದೆ. ಅಂದರೆ ಒಟ್ಟು 2,15,100 ರೂ.ಗಳನ್ನು ಖರ್ಚು ಮಾಡಲಾಗುತ್ತಿದೆ.

ಖಾಸಗಿ ವೈದ್ಯಕೀಯ ಕಾಲೇಜುಗಳಲ್ಲಿ ಮೆರಿಟ್ ಆಧಾರದ ಮೇಲೆ ಆಯ್ಕೆಯಾಗಿ ಓದುತ್ತಿರುವ ವಿದ್ಯಾರ್ಥಿಗಳಿಗೆ ಸ್ಕಾಲರ್‌ಷಿಪ್ ಮಾಡುವಾಗ ತಿಂಗಳಿಗೆ1800ರೂಪಾಯಿಗಳಂತೆ 12 ತಿಂಗಳುಗಳಿಗೆ 21.600 ರೂಪಾಯಿ ಬಿಡುಗಡೆ ಮಾಡಲಾಗುತ್ತಿದೆ.

೫) ಸಲಹೆ ಉತ್ತಮವಾಗಿದೆ. ಕಡ್ಡಾಯವಾಗಿ ಗ್ರಾಮೀಣ ಸೇವೆಯನ್ನು ಮಾಡಬೇಕೆಂಬ ಷರತ್ತನ್ನು ವಿಧಿಸುವ ಬಗ್ಗೆ ಪರಿಶೀಲಿಸಲಾಗುವುದು.

ಕಳೆದ 5 ವರ್ಷಗಳಿಂದ ರಾಜ್ಯದ ಪ್ರತಿಯೊಂದು ವೈದ್ಯಕೀಯ ಮಹಾವಿದ್ಯಾಲಯದಿಂದ ಪದವಿಯನ್ನು ಪಡೆದು ವೈದ್ಯಕೀಯ ವೃತ್ತಿಯನ್ನು ನಡೆಸಲು ಅರ್ಹತೆ ಪಡೆದಿರುವ ರಾಜ್ಯದ ಮತ್ತು ಹೊರ ರಾಜ್ಯದ ಅಭ್ಯರ್ಥಿಗಳ ವಿವರ (1990 ರಿಂದ 1994) ಕುರಿತ ಮಾಹಿತಿ :

ಕ್ರಮ ಸಂಖ್ಯೆ	ಕಾಲೇಜಿನ ವಿವರ	ಕರ್ನಾಟಕ ರಾಜ್ಯದ ವಿದ್ಯಾರ್ಥಿಗಳು	ಹೊರ ರಾಜ್ಯದ ವಿದ್ಯಾರ್ಥಿಗಳು
1.	ಬೆಂಗಳೂರು ವೈದ್ಯಕೀಯ ಕಾಲೇಜು, ಬೆಂಗಳೂರು	593	77
2.	ಮೈಸೂರು ವೈದ್ಯಕೀಯ ಕಾಲೇಜು, ಮೈಸೂರು	673	17
3.	ಕರ್ನಾಟಕ ವೈದ್ಯಕೀಯ ಕಾಲೇಜು,ಹುಬ್ಬಳ್ಳಿ	650	14
4.	ವಿಜಯನಗರ ವೈದ್ಯಕೀಯ ವಿಜ್ಞಾನ ಸಂಸ್ಥೆ ಬಳ್ಳಾರಿ	477	75
5.	ಡಾ॥ ಬಿ.ಆರ್.ಅಂಬೇಡ್ಕರ್ ಕಾಲೇಜು, ಬೆಂಗಳೂರು	343	218
6.	ಆಲ್ ಅಮೀನ್ ವೈದ್ಯಕೀಯ ಕಾಲೇಜು, ಬಿಜಾಪುರ	169	321
7.	ಕೆಂಪೇಗೌಡ ವೈದ್ಯಕೀಯ ವಿಜ್ಞಾನ ಸಂಸ್ಥೆ, ಬೆಂಗಳೂರು	334	196
8.	ಶ್ರೀ ದೇವರಾಜು ಅರಸ ದತ್ತಿ ವೈದ್ಯಕೀಯ ಕಾಲೇಜು, ಕೋಲಾರ	213	250
9.	ಆದಿ ಚುಂಚನಗಿರಿ ವೈದ್ಯಕೀಯ ಕಾಲೇಜು ಬಳ್ಳಾರಿ	322	113
10.	ಸೆಂಟ್ ಜಾನ್ಸ್ ವೈದ್ಯಕೀಯ ಕಾಲೇಜು, ಬೆಂಗಳೂರು	116	160
11.	ಕಸ್ತೂರಬಾ ವೈದ್ಯಕೀಯ ಕಾಲೇಜು, ಮಂಗಳೂರು ವಿಭಾಗ	422	552
12.	ಕಸ್ತೂರಬಾ ವೈದ್ಯಕೀಯ ಕಾಲೇಜು, ಮಣಿಪಾಲ	104	910
13.	ಎಂ.ಎಸ್. ರಾಮಯ್ಯ ವೈದ್ಯಕೀಯ ಕಾಲೇಜು, ಬೆಂಗಳೂರು	74	466
14.	ಜೆಜೆಎಂ ವೈದ್ಯಕೀಯ ಕಾಲೇಜು, ದಾವಣಗೆರೆ	597	507

ಈ ಕೆಳಗಿನ ವೈದ್ಯಕೀಯ ಕಾಲೇಜುಗಳಿಂದ ಮಾಹಿತಿಯನ್ನು ಕೋರಿದ್ದು ಮಾಹಿತಿಯನ್ನು ಪ್ರತ್ಯೇಕವಾಗಿ ಒದಗಿಸಲಾಗುವುದು.

1. ಜೆ.ಎಸ್.ಎಸ್. ವೈದ್ಯಕೀಯ ಕಾಲೇಜು, ಮೈಸೂರು
2. ಜೆ.ಎಸ್. ವೈದ್ಯಕೀಯ ಕಾಲೇಜು ಬೆಳಗಾಂ
3. ಎಂ.ಆರ್. ವೈದ್ಯಕೀಯ ಕಾಲೇಜು ಗುಲ್ಬರ್ಗಾ
4. ಬಿಎಲ್‌ಡಿಇ ವೈದ್ಯಕೀಯ ಕಾಲೇಜು, ಬಿಜಾಪೂರ
5. ಶ್ರೀ ಸಿದ್ಧಾರ್ಥ ವೈದ್ಯಕೀಯ ಕಾಲೇಜು, ತುಮಕೂರು.

ವಿಜಾಪುರ ಜಿಲ್ಲಾ ಪಂಚಾಯತ್‌ದಿಂದ ಮಂಜೂರಾದ ಹೈಸ್ಕೂಲಗಳಿಗೆ ಅನುದಾನ.

359 - ಶ್ರೀ ಬಿ.ಜಿ. ಚಿಮ್ಮನಕಟ್ಟಿ (ಬಾದಾಮಿ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1987-88ರಲ್ಲಿ ಜಿಲ್ಲಾ ಪಂಚಾಯತಿ ಯಿಂದ ಮಂಜೂರಾದ ಪ್ರೌಢಶಾಲೆಗಳೆಷ್ಟು?

ಆ) ಜಿಲ್ಲಾ ಪಂಚಾಯಿತಿಯಿಂದ ನೀತಿ ನಿಯಮಗಳ ಅನುಸಾರ ಅನುದಾನ ಸಹಿತ ಮಂಜೂರಾತಿ ಹೊಂದಿದ ಪ್ರೌಢ ಶಾಲೆಗಳನ್ನು ಅನುದಾನ ಸಂಹಿತೆಯಲ್ಲಿ ಸೇರಿಸುವುದಕ್ಕೋಸ್ಕರ ಜಿಲ್ಲಾ ಪಂಚಾಯತ್ ವಿಜಾಪುರದವರು ಸರ್ವಾನುಮತದ ನಿರ್ಣಯ ಕೈಗೊಂಡಿದ್ದು ನಿಜವೇ?

ಇ) ಹಾಗಿದ್ದಲ್ಲಿ, ಶಾಲೆಗಳಿಗೆ ಸೌಕರರ ನೇಮಕಾತಿ ಅನುಮೋದನೆಗೆ ಯಾವ ಮಂಜೂರಾತಿ ನೀಡಲಾಗುವುದು?

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) :

ಅ) 1987-88ರಲ್ಲಿ ಜಿಲ್ಲಾ ಪಂಚಾಯತನಿಂದ ಯಾವುದೇ ಪ್ರೌಢಶಾಲೆ ಮಂಜೂರಾಗಿಲ್ಲ.

ಆ) 1988-98ನೇ ಸಾಲಿನಲ್ಲಿ ಮಂಜೂರಾದ 27 ಪ್ರೌಢಶಾಲೆಗಳಿಗೆ ಅನುದಾನ ನೀಡುವ ಬಗ್ಗೆ ಜಿಲ್ಲಾ ಪಂಚಾಯತ್ ನಿರ್ಣಯ ಕೈಗೊಂಡಿದೆ.

ಇ) ಆದರೆ, ಈ ಶಾಲೆಗಳು ಶಾಶ್ವತ ಅನುದಾನ ರಹಿತ ಶಾಲೆಗಳಾಗಿರುವುದರಿಂದ ನೇಮಕಾತಿ ಅನುಮೋದನೆ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ಅನಧಿಕೃತ ಇಲೆಕ್ಟ್ರೋ ಹೋಮಿಯೋಪತಿ ಕಾಲೇಜು ಮತ್ತು ನರ್ಸಿಂಗ್ ಕಾಲೇಜುಗಳ ಬಗ್ಗೆ.

361 - ಡಾ|| ಯು. ಚಿತ್ತರಂಜನ್ (ಭಟ್ಕಳ) : ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?